**IN THE COURT OF Addl. Civil Judge & J.M.F.C ($2^{ND}$ COURT) KARWAR.**

Civil Mis. 8/2019 R.W: 1

Witness name : Shri Balakrishna
Father's Name : Tukoba Naik
Age : 65 years
Occupation : Rtd. Govt. Servant
Resident : Keshavnaikwada, Kodibag, Karwar
Duly sworn on : 21-12-2023

**Examination in chief by: Sri. CDN Advocate:-.**

1. I have filed affidavit in lieu of examination in chief, the contents of the said affidavit are true and correct. I have instructed in person to my Advocate in preparing the same.

**No representation on behalf of the petitioner. Hence, cross examination of RW.1 is deferred.**

( Dictated in open court and typed as per the dictation)

R.O.A.C.

**Addl. Civil Judge, Kawar.**

**ಸಾಕ್ಷಿಯನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 13.02.2024.**

**ಪಾಟೀ ಸವಾಲುಃ ಶ್ರೀ ಎಸ್ ಎಸ್ ಎಚ್ ವಕೀಲರಿಂದಃ**

2. ಪಾಂಡುರಂಗ ಮತ್ತು ಮಹಾದೇವ ಇವರಿಬ್ಬರೂ ನನ್ನ ಸಹೋದರರು. ಸದರಿಯವರಿಬ್ಬರೂ ನನ್ನ ವಿರುದ್ಧ ನ್ಯಾಯಾಲಯದಲ್ಲಿ ವಾಂಟಣಿ ಸಲುವಾಗಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನನ್ನು 5 ನೇ ಪ್ರತಿವಾದಿಯನ್ನಾಗಿ ಮಾಡಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನನ್ನ ವಕೀಲರ ಮುಖಾಂತರ ಹಾಜರಾಗಿರುತ್ತೇನೆ ಎಂದರೆ ಸರಿ. ಸದರಿ ದಾವೆಯು ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆ ಡಿಕ್ರಿ ಆದ ಕಾಲಕ್ಕೆ ನಾನು ನ್ಯಾಷನಲ್ ಇನ್ಸುರೆನ್ಸ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ಸರ್ವೇ ನಂ.130/2 ರಲ್ಲಿ ಯಾರಿಗೆ ಎಷ್ಟು ಹಕ್ಕು ಇದೆ ಎನ್ನುವುದನ್ನು ಘೋಷಿಸಲಾಯಿತು ಎಂದರೆ ಸರಿ. ಸದರಿ ಜಾಗದ 9 ಗುಂಟೆ 8 ಆಣೆಯಲ್ಲಿ ಯಾರಿಗೆ ಯಾವ ಕಡೆಗೆ ಜಾಗ ಬರುತ್ತದೆ ಎನ್ನುವುದು ಹಿಸ್ಸೆ ಆಗಿರುವುದಿಲ್ಲಾ ಎಂದರೆ ಸರಿ. ನಾನು 2019 ನೇ ಇಸವಿಯಲ್ಲಿ ನಿವೃತ್ತಿ ಹೊಂದಿರುತ್ತೇನೆ. 2019 ನೇ ಇಸವಿಯಲ್ಲಿ ನಮ್ಮ ನಡುವೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ಸರಸ ನಿರಸದಂತೆ ಭಾಗ ಆಗದೇ ಇದ್ದುದರ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿ. ದಾವೆಯಲ್ಲಾದ ಡಿಕ್ರಿಯ ಆಧಾರದ ಮೇಲೆ ನಾನು ನ್ಯಾಯಾಲಯದಲ್ಲಿ ಎಫ್ ಡಿ ಪಿ ಅರ್ಜಿಯನು ಸಲ್ಲಿಸಿರುವುದಿಲ್ಲಾ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಲ್ಲಿ ನಮ್ಮ ತಾಯಿಯವರ ಹೆಸರು ಇರುವುದರ ಬಗ್ಗೆ ನನಗೆ ತಿಳಿದಿದೆ. ಸಂಪೂರ್ಣ 9 ಗುಂಟೆ 8 ಆಣೆ ಕ್ಷೇತ್ರ ನನ್ನ ತಾಯಿಯ ಹೆಸರಿನಲ್ಲಿ ಇತ್ತು. ನಮ್ಮ ತಾಯಿಯವರು 2018 ರ ಮೊದಲೇ ತೀರಿಹೋಗಿರುತ್ತಾರೆ ಎಂದರೆ ಸರಿ. 2019 ನೇ ಇಸವಿಯಲ್ಲಿ ನಮ್ಮ ತಾಯಿಯವರು ಜೀವಂತ ಇಲ್ಲಾ ಎಂದರೆ ಸರಿ. ನಮ್ಮ ತಾಯಿಯವರು ತೀರಿಹೋದ ನಂತರ ಪಹಣಿ ಪತ್ರಿಕೆಯಲ್ಲಿ ವಾರಸುದಾರರ ಹೆಸರನ್ನು ನಮೂದಿಸಲು ಅರ್ಜಿಯನ್ನು ನೀಡಿರುವುದಿಲ್ಲಾ ಎಂದರೆ ಸರಿ. ಸರ್ವೇ ನಂ.130/2 ರಲ್ಲಿ ಸರಸ ನಿರಸ ವಾಂಟಣಿ ಆಗಿದೇ ಇದ್ದರೂ ಸಹ 2019 ನೇ ಇಸವಿಯಲ್ಲಿ ಸದರಿ ಸರ್ವೇ ನಂಬರನಲ್ಲಿ ರಸ್ತೆಗೆ ತಾಗಿ ನಾನು ಮನೆಯನ್ನು ನಿರ್ಮಿಸಲು ಪ್ರಾರಂಭಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ನಿವೃತ್ತಿ

ಹೊಂದಿದ ನಂತರ ಉಳಿಯಲು ಮನೆ ಇಲ್ಲದೇ ಇದ್ದ ಕಾರಣ ಮತ್ತು ಬಾಡಿಗೆ ಹಣವನ್ನು ಭರಿಸಲು ಆಗುವುದಿಲ್ಲಾ ಎಂಬ ಕಾರಣಕ್ಕಾಗಿ ನಾನು ಮನೆ ನಿರ್ಮಾಣ ಕೈಗೊಂಡಿದ್ದೇನೆ. ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ಅರ್ಜಿದಾರನ ಮಗ ಮನೆಕಟ್ಟಿಕೊಂಡು ವಾಸವಾಗಿದ್ದಾನೆ ಎಂದರೆ ಸರಿ. ಸರ್ವೇ ನಂ.130/1 ಕ್ಷೇತ್ರ 1 ಗುಂಟೆ 8 ಆಣೆ ಇದರಲ್ಲಿ ಅರ್ಜಿದಾರನ ಮಕ್ಕಳು ಮನೆ ಕಟ್ಟಿಕೊಂಡಿದ್ದು, ಸದರಿ ಜಮೀನು ಅರ್ಜಿದಾರ ಮಹಾದೇವ ತುಕೋಬಾ ನಾಯ್ಕ ಇವರಿಗೆ ಭೂನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ನಮ್ಮ ಮನೆಯ ಹಿಂದೆ ಇರುವ ಹಳೆಯ ಮನೆಯಲ್ಲಿ ನನ್ನ ತಂಗಿ ವಾಸವಾಗಿದ್ದಾರೆ ಎಂದರೆ ಸರಿ. ನಾನು ಮನೆ ಕಟ್ಟುವ ಕಾಲಕ್ಕೆ ಅರ್ಜಿದಾರ ಡಿಕ್ರಿಯ ಪ್ರಕಾರ ವಾಂಟಣಿ ಮಾಡಿಕೊಂಡು ಮನೆಯನ್ನು ಕಟ್ಟು ಎಂದು ನನಗೆ ಹೇಳಿರುತ್ತಾನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

( Dictated in open court and typed as per the dictation)

R.O.A.C.

**Addl. Civil Judge, Kawar.**

**ಸಾಕ್ಷಿಯನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 01.07.2024.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಸ್ ಎಸ್ ಎಚ್ ವಕೀಲರಿಂದಃ**

2. ನಾನು ಮೇ-2019 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಿವೃತ್ತಿ ಹೊಂದಿದ ಎಷ್ಟು ದಿನಗಳ ನಂತರ ಮನೆಯನ್ನು ನಿರ್ಮಾಣ ಮಾಡಲು ನಾನು ಪ್ರಾರಂಭಿಸಿದೆನು ಎಂದು ನಿವೃತ್ತಿ ಹೊಂದುವ ಮೊದಲೇ ನಾನು ಮನೆ ಕಟ್ಟಲು ಪ್ರಾರಂಭಸಿದ್ದೆ ಎಂದು ನುಡಿಯುತ್ತಾರೆ. ನಾನು ಜೂನ್ 2019 ನೇ ಇಸವಿಯಲ್ಲಿ ಮನೆಯನ್ನು ಕಟ್ಟಲು ಪ್ರಾರಂಭಿಸಿದಿದ್ದೇನೆ ಎಂದರೆ ನನಗೆ ನೆನಪಿಲ್ಲಾ. ನಾನು ಜೂನ್ 2019 ನೇ ಇಸವಿಯಲ್ಲಿ ಮನೆಯನ್ನು ಕಟ್ಟಲು ಪ್ರಾರಂಭಿಸಿದಾಗ ಅರ್ಜಿದಾರ ನಗರಸಭೆಗೆ ಅದೇ ತಿಂಗಳಿನಲ್ಲಿ ನಾನು ಮನೆಕಟ್ಟುತ್ತಿರುವ ಜಮೀನು ಜಂಟಿ ಕುಟುಂಬದ ಆಸ್ತಿ ಆಗಿದ್ದು, ಅದನ್ನು ಭಾಗಮಾಡಿಕೊಳ್ಳದೇ ಮತ್ತು ದಾಖಲೆಗಳಲ್ಲಿ ಹೆಸರು ಬರದೇ ಮನೆಯನ್ನು ಕಟ್ಟುತ್ತಿದ್ದೇನೆಂದು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರ ನಗರಸಭೆಯಲ್ಲಿ ಕೆಲಸ ಮಾಡುತ್ತಾರಾ ಎಂದರೆ ಇಲ್ಲಾ ಎಂದು ನುಡಿಯುತ್ತಾರೆ. ನಗರಸಭೆಯವರು ಲಿಖಿತ ರೂಪದಲ್ಲಿ ಮನೆಯನ್ನು ಕಟ್ಟಲು ನನಗೆ ಪರವಾನಿಗೆಯನ್ನು ನೀಡಿರುವುದಿಲ್ಲಾ ಎಂದರೆ ಸರಿ. ದಿನಾಂಕಃ 19.08.2019 ರಂದು ನಗರಸಭೆಯವರು ನಾನು ಅನಧಿಕೃತವಾಗಿ ಮನೆಯನ್ನು ಕಟ್ಟುತ್ತಿದ್ದೇನೆ, ಮನೆ ನಿರ್ಮಾಣವನ್ನು ನಿಲ್ಲಿಸಬೇಕೆಂದು ನನಗೆ ನೋಟೀಸನ್ನು ನೀಡಿದ್ದರು ಎಂದರೆ ನನಗೆ ನೆನಪಿಲ್ಲಾ. ನಗರಸಭೆಯವರು ನೋಟೀಸ ನೀಡಿದ್ದರೂ ಸಹ ನಾನು ಮನೆ ಕಟ್ಟಿಸುವುದನ್ನು ನಿಲ್ಲಿಸದ ಕಾರಣ ಅರ್ಜಿದಾರ ಈ ಕುರಿತು ಕಾರವಾರ ನಗರ ಪೋಲೀಸ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲಾ. ಅದರಂತೆ ಪೋಲೀಸರು ನನಗೆ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಜಮೀನನ್ನು ಪಾಲು ಮಾಡಿಕೊಂಡು ಮನೆಯನ್ನು ಕಟ್ಟಿಸುವಂತೆ ಹೇಳಿದರು ಎಂದರೆ ಸರಿ. ಅದಾದ ನಂತರವೂ ಸಹ ನಾನು ಮನೆ ಕಟ್ಟಿಸುವುದನ್ನು ನಿಲ್ಲಿಸಿಲ್ಲಾ ಎಂದರೆ ಸರಿಯಲ್ಲ. ಈಗ ನಾನು ಎಲ್ಲಿ ವಾಸವಾಗಿದ್ದೇನೆ ಎಂದರೆ ನಾನು ಈಗಲೂ ಅದೇ ಮನೆಯಲ್ಲಿ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ಅಂದರೆ ನಾನು ಮನೆ ನಿರ್ಮಾಣ ಪೂರ್ಣಗೊಳಿಸಿ ಆ ಮನೆಯಲ್ಲಿ ವಾಸಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮನೆ ನಿರ್ಮಾಣ

ಪೂರ್ಣವಾಗಿಲ್ಲಾ ಎಂದು ನುಡಿಯುತ್ತಾರೆ. ನಾನು ಮನೆ ನಿರ್ಮಾಣ ನಿಲ್ಲಿಸದೇ ಇದ್ದ ಕಾರಣ ಅರ್ಜಿದಾರ ನ್ಯಾಯಾಲಯದಲ್ಲಿ ದಾವೆ ಹೂಡಿ ನನ್ನ ವಿರುದ್ಧ ನಿರ್ಬಂಧಕಾಜ್ಞೆ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ನ್ಯಾಯಾಲಯ ಆದೇಶ ಮಾಡಿದ ನಂತರ ನಾನು ಮನೆ ನಿರ್ಮಾಣ ನಿಲ್ಲಿಸಿರುತ್ತೇನೆಂದು ನುಡಿಯುತ್ತಾರೆ. ಎಫ್ ಡಿ ಪಿ ನಂ.22/2019 ರಲ್ಲಿ ಮನೆಯ ಪ್ಲಂಬಿಂಗ್ , ಪೇಂಟಿಂಗ್ ಮತ್ತು ಓವರಹೆಡ್ ಟ್ಯಾಂಕ ಅಳವಡಿಸಿರುವುದಿಲ್ಲಾ ಎಂದು ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು , ಅವೆಲ್ಲಾ ಮೊದಲೇ ಆಗಿತ್ತೆಂದು ನುಡಿಯುತ್ತಾರೆ. ಆದ ಕಾರಣ ನ್ಯಾಯಾಲಯವು ನಾನು ನಿರ್ಮಾಣವನ್ನು ಮುಂದುವರೆಸಬಾರದೆಂದು ನಿರ್ಬಂಧಕಾಜ್ಞೆ ಹೊರಡಿಸಿರುತ್ತದೆ ಎಂದರೆ ನಾನು ನಿರ್ಮಾಣ ಮುಂದುವರೆಸಿಲ್ಲಾ ಎಂದು ನುಡಿಯುತ್ತಾರೆ. ಈ ಮನೆಗೆ ಓವರಹೆಡ್ ಟ್ಯಂಕನ್ನು ಅಳವಡಿಸಲಾಗಿದೆ ಎಂದರೆ ಸರಿ. ಈಗ ನಾನು ವಾಸ್ತವ್ಯ ಇರುವ ಮನೆಗೆ ಸೆಫ್ಟಿಕ್ ಟ್ಯಾಂಕ ಮಾಡಿಸಲಾಗಿದೆ ಎಂದರೆ ಅದು ಮೊದಲೇ ಆಗಿತ್ತೆಂದು ನುಡಿಯುತ್ತಾರೆ. ಈಗ ಮನೆಗೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ಮುಗಿಸಿ ಅದೇ ಮನೆಯಲ್ಲಿ ನಾನು ವಾಸ ಮಾಡುತ್ತಿದ್ದೇನೆ ಎಂದರೆ ಕೆಲಸವೆಲ್ಲಾ ಮುಗಿದಿಲ್ಲಾ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ನಾಲ್ಕು ಛಾಯಾಚಿತ್ರಗಳನ್ನು ತೋರಿಸಿದ್ದು , ಅವರು ಒಪ್ಪಿಕೊಂಡ ಕಾರಣ ಅವುಗಳನ್ನು ಅನುಕ್ರಮವಾಗಿ ನಿಪಿ.8 ರಿಂದ ನಿಪಿ.11 ಎಂದು ಗುರುತಿಸಲಾಯಿತು.

**(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**